# ಆಹಾ ಸುದ್ದಿ!

★ ಸಸಿತೋಟ



ಪ್ರೇಮಕ್ಕೆ ಉದ್ದ– ಅಗಲ ಎಂಬುದಿಲ್ಲ, ನಿಜ. ಆದರೆ ಪ್ರೇಮ ಬಲು ಭಾರ ಎಂಬುದು ಪ್ಯಾರಿಸ್ ಸೇತುವೆಯೊಂದು ಕುಸಿದಿದ್ದರಿಂದ ಸಾಬೀತಾಗಿದೆ. ಪಾಗಲ್ ಪ್ರೇಮಿಗಳು ತಮ್ಮ ನಿಷ್ಠೆಯ ಸಂಕೇತವಾಗಿ ಲವ್‌ಲಾಕ್‌ಗಳನ್ನು ಈ ಸೇತುವೆಗೆ ಕಟ್ಟಿ ಕಟ್ಟಿ ಅವುಗಳ ಭಾರಕ್ಕೆ ಸೇತುವೆಯ ಒಂದು ಭಾಗವೇ ಕುಸಿದುಬಿಟ್ಟಿದೆಯಂತೆ. ಅಧಿಕಾರಿಗಳು ಬೀಗದತಟ್ಟೆಗಳನ್ನು ತೆರವುಗೊಳಿಸುತ್ತಿದ್ದು, ನೊಂದ ಪ್ರೇಮಿಯೊಬ್ಬ 'ನಮ್ಮ ಸೇತುವೆಗಳು ಪ್ರೇಮವನ್ನು ತಡೆಯುವುದಿಲ್ಲ' ಎಂದು ಫಲಕ ನೆಟ್ಟಿದ್ದಾನಂತೆ. ಸೇತುವೆ ಪ್ರೇಮ– ಪ್ರೀತಿಗೆ ತಡೆ ಒಡ್ಡುವುದಿಲ್ಲವೋ ಅಥವಾ ಪ್ರೇಮದ ಭಾರವನ್ನು ತಡೆದುಕೊಳ್ಳಲಾರದೋ ಎಂದು ಅಲ್ಲಿಗೆ ಬಂದವರೆಲ್ಲ ತಲೆ ಕೆಡಿಸಿಕೊಳ್ಳುತ್ತಿರಬಹುದು.

ಮೊಂಗೋಲಿಯಾದ ಕಚ್ಚಾ ರಸ್ತೆಯಲ್ಲಿ ಕೆಟ್ಟು ನಿಂತಿದ್ದ ಬೆಂಟ್ಲೆ ಕಾರನ್ನು ಲಂಡನ್ನಿನ ಮೆಕ್ಯಾನಿಕ್ 24 ಸಾವಿರ ಕಿ.ಮೀ. ದೂರ ಕ್ರಮಿಸಿ ರಿಪೇರಿ ಮಾಡಿಕೊಟ್ಟಿದ್ದಾನಂತೆ. ರ‍್ಯಾಲಿಯಲ್ಲಿ ಭಾಗವಹಿಸಿದ್ದ ಈ ಕಾರಿನ ರಿಪೇರಿಗೆ 87 ಪೌಂಡ್ ಬೆಲೆಯ ಬಿಡಿಭಾಗ ಹಿಡಿದುಕೊಂಡು ಮೂರು ವಿಮಾನಗಳನ್ನು ಬದಲಿಸಿ, 400 ಕಿ.ಮೀ.ಗಳಷ್ಟು ದೂರವನ್ನು ಕಾರಿನಲ್ಲಿ ಪ್ರಯಾಣಿಸಿ ಕೊನೆಗೂ ಬೆಂಟ್ಲೆ ರಿಪೇರಿ ಮಾಡಲು ಮೆಕ್ಯಾನಿಕ್ ವಿಲಿಯಮ್‌ಗೆ ತಗುಲಿದ ಸಮಯ 10 ನಿಮಿಷಗಳು. ಗ್ರಾಹಕ ಸೇವೆಯೆಂದರೆ ಇದೇ ಇರಬಹುದು.



ನೆದರ್‌ಲೆಂಡ್‌ನ ಅಲೆಕ್ಸಾಂಡರ್ ಸಿರ್ಕ್ ಆನ್‌ಲೈನ್‌ನಲ್ಲಿ ಪರಿಚಯವಾದ ಚೀನಾದ ಯುವತಿಗೋಸ್ಕರ ಚೀನಾದ ವಿಮಾನ ನಿಲ್ದಾಣದಲ್ಲಿ 10 ದಿನಗಳ ಕಾಲ ಕಾದಿದ್ದು, ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ನಿಲ್ದಾಣದ ಕುರ್ಚಿಯಲ್ಲಿ ಕುಳಿತುಕೊಂಡ ಸಿರ್ಕ್‌ಗೆ ಕೊನೆಗೂ ಗೆಳತಿ ಮುಖ ತೋರಿಸಲಿಲ್ಲವಂತೆ. ಆಕೆ ಆ ಸಂದರ್ಭದಲ್ಲಿ ಆಸ್ಪತ್ರೆಯೊಂದರಲ್ಲಿ ಮುಖಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳುತ್ತಿದ್ದರೆ, ಆತನೂ ಇನ್ನೊಂದು ಆಸ್ಪತ್ರೆಗೆ ಸೇರಿದ ಸೋತ ದೇಹಕ್ಕೆ ಚಿಕಿತ್ಸೆ ಪಡೆಯಲು. ಆಕೆ ಏನಾದರೂ ಸಿರ್ಕ್‌ನನ್ನು ಭೇಟಿ ಮಾಡಲು ನೆದರ್‌ಲೆಂಡ್‌ಗೆ ತೆರಳಿದರೆ ಆತನೇ ಬದಲಾದ ಆಕೆಯ ಚೆಹರೆಯ ಗುರುತು ಸಿಗದೇ ವಿಮಾನ ನಿಲ್ದಾಣದಲ್ಲೇ ಕೂರುವಂತೆ ಮಾಡಬಹುದು.

ಝೆಕೊಸ್ಲೊವಾಕಿಯಾದಲ್ಲಿ ಪಬ್‌ನಲ್ಲಿ ಬಿಲ್ ಚುಕ್ತಾ ಮಾಡಲು ಕಾಸಿಲ್ಲದ ಕುಡುಕನೊಬ್ಬ ತನ್ನ ಉಡುಪನ್ನೇ ಒತ್ತೆ ಇಟ್ಟು ಹಣ ತರಲು ಆರಾಮವಾಗಿ ನಗರದಲ್ಲಿ ನಡೆದುಕೊಂಡು ಹೋದನಂತೆ. ಕಾಲಿಗೆ ಸಾಕ್ಸ್, ಕೈಯಲ್ಲಿ ಮೊಬೈಲ್ ಬಿಟ್ಟರೆ ಉಳಿದಂತೆ ಖಾಲಿಖಾಲಿಯಾಗಿ ಓಡಾಡುತ್ತಿದ್ದನಂತೆ. ಆತನಿಗೆ ಮೊಬೈಲ್ ಮುಖ್ಯವೆನಿಸಿದರೆ, ಪಬ್ ಮಾಲೀಕನಿಗೆ ಉಡುಪು ದುಬಾರಿಯದ್ದು ಎನಿಸಿರಬಹುದು.



ಇಂಗ್ಲೆಂಡ್‌ನ ಫಿಟ್‌ನೆಸ್ ಪ್ರಿಯೆ ಕ್ಯಾಟ್ ಎಂಬಾಕೆ ಹೆರಿಗೆ ನೋವು ಆರಂಭವಾದ ಮೇಲೂ ಪೋಲ್ ಡಾನ್ಸ್ ಮಾಡಿದಳಂತೆ. ಡಾನ್ಸ್‌ನಿಂದ ಹೆರಿಗೆ ಸುಗಮವಾಗಿ ಆದರೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಾ ಕೊಠಡಿ ಬದಲು ಒಂದೊಂದು ಕಂಬ ಹುಗಿಯಬಹುದು.

ಅಮೆರಿಕದ ಕಂಪೆನಿಯೊಂದು ವಿಶ್ವವಿದ್ಯಾನಿಲಯಗಳಲ್ಲಿ ಪಿಜ್ಜಾ ವೆಂಡಿಂಗ್ ಯಂತ್ರಗಳನ್ನು ಹಾಕಿದೆಯಂತೆ. 10 ಡಾಲರ್ ಹಾಕಿದರೆ ಬಿಸಿ ಬಿಸಿ ಪಿಜ್ಜಾ ಇರುವ ರೊಟ್ಟಿನ ಪೆಟ್ಟಿಗೆ ತೊಪಕ್ಕನೆ ಬೀಳುತ್ತದಂತೆ. ಇದುವರೆಗೆ ಕಾಂಡೋಮ್ ವೆಂಡಿಂಗ್ ಯಂತ್ರಗಳನ್ನು ಕಾಲೇಜುಗಳಲ್ಲಿಡುತ್ತಿದ್ದ ಅಲ್ಲಿಯ ಕಂಪೆನಿಗಳಿಗೆ ತಡವಾಗಿಯಾದರೂ ಅರ್ಥವಾಗಿದೆ, ಮೊದಲು ಯಾವುದಕ್ಕೂ ಹೊಟ್ಟೆ ತುಂಬಿರಬೇಕು ಎಂದು.

